ಕ್ರ.ಸಂ	ತಾಲ್ಲೂಕು	ಪಶುವೈದ್ಯಕೀಯ ಆಸ್ಪತ್ರೆ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	ಒಟ್ಟು
			ಪೇತ್ರಿ ಧರ್ಮಸಾಲೆ	
	ಒಟ್ಟು	–	**5**	**5**
2.	ಕಾರ್ಕಳ		ಕುಚ್ಚೂರು ನಾಡ್ಪಾಲು ಮಂಡ್ಕೂರು	
	ಒಟ್ಟು	–	**3**	**3**
3.	ಕುಂದಾಪುರ		ಹೆಮ್ಮಾಡಿ ಬಸ್ರೂರು ಕಂಡ್ಲೂರು ಮಂಡಿಮೂರುಕೈ ಕೊರ್ಗಿ	
	ಒಟ್ಟು		**5**	**5**
	ಒಟ್ಟು	–	**13**	**13**

ಮೈಸೂರು ತಾಲ್ಲೂಕಿನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವಸತಿನಿಲಯಗಳ ಮಾಹಿತಿ ಬಗ್ಗೆ

4608 (5365) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನಲ್ಲಿ ಇರುವ ಸಮಾಜ ಕಲ್ಯಾಣ ವಸತಿನಿಲಯಗಳು ಎಷ್ಟು; ಅವು ಎಲ್ಲಿವೆ?

ಆ) ಈ ವಸತಿನಿಲಯಗಳ ವಿದ್ಯಾರ್ಥಿಗಳಿಗಾಗಿ ಮಾಡುತ್ತಿರುವ ತಲಾವಾರು ವೆಚ್ಚ ಎಷ್ಟು?

ಇ) ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳು ಏನು; ಇಲ್ಲಿನ ಫಲಿತಾಂಶ ಉತ್ತಮಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ) ಇತರೆ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಇರುವ ಜನಪ್ರಿಯತೆಯನ್ನು ಸಮಾಜ ಕಲ್ಯಾಣ ಇಲಾಖೆಯ ವಸತಿನಿಲಯಗಳಿಗೂ ಸಹ ವಿಸ್ತರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳೇನು?

ಉ) ಈ ಕ್ರಮಗಳನ್ನು ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಮೈಸೂರು ತಾಲ್ಲೂಕಿನಲ್ಲಿ ಒಟ್ಟು 13 ಸರ್ಕಾರಿ ಮೆಟ್ರಿಕ್–ಪೂರ್ವ/ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳನ್ನು ಇ ಕೆಳಕಂಡ ಸ್ಥಳಗಳಲ್ಲಿ ನಿರ್ವಹಿಸಲಾಗುತ್ತಿದೆ:

ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು

1. ಬಾಲಕರ ವಿದ್ಯಾರ್ಥಿನಿಲಯ, ನಜರಾಬಾದ್
2. ಬಾಲಕಿಯರ ವಿದ್ಯಾರ್ಥಿನಿಲಯ, ವಿ.ವಿ. ಮೊಹಲ್ಲಾ–1
3. ಬಾಲಕಿಯರ ವಿದ್ಯಾರ್ಥಿನಿಲಯ, ವಿ.ವಿ. ಮೊಹಲ್ಲಾ–2
4. ಬಾಲಕಿಯರ ವಿದ್ಯಾರ್ಥಿನಿಲಯ, ಕಡಕೋಳ
5. ಬಾಲಕರ ವಿದ್ಯಾರ್ಥಿನಿಲಯ, ಕೀಳನಪುರ
6. ಬಾಲಕರ ವಿದ್ಯಾರ್ಥಿನಿಲಯ, ಜಯಪುರ
7. ಬಾಲಕರ ವಿದ್ಯಾರ್ಥಿನಿಲಯ, ಎಸ್. ಕಲ್ಲಹಳ್ಳಿ

ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು

1. ಪಿಯುಸಿ ಬಾಲಕರ ವಿದ್ಯಾರ್ಥಿನಿಲಯ, ಬೋಗಾದಿ
2. ವರ್ಗೀಕೃತ ಬಾಲಕರ ವಿದ್ಯಾರ್ಥಿನಿಲಯ, ಬೋಗಾದಿ
3. ವೈದ್ಯಕೀಯ/ತಾಂತ್ರಿಕ ಬಾಲಕರ ವಿದ್ಯಾರ್ಥಿನಿಲಯ, ಶಾರದಾದೇವಿ ನಗರ
4. ವೃತ್ತಿಪರ ಬಾಲಕಿಯರ ವಿದ್ಯಾರ್ಥಿನಿಲಯ, ಕುವೆಂಪು ನಗರ
5. ವೃತ್ತಿಪರ ಬಾಲಕರ ವಿದ್ಯಾರ್ಥಿನಿಲಯ, ಕೆಸರೆ
6. ಬಾಲಕಿಯರ ವಿದ್ಯಾರ್ಥಿನಿಲಯ, ವಿ.ವಿ. ಮೊಹಲ್ಲಾ

ಆ) ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಖರ್ಚುಮಾಡುತ್ತಿರುವ ಸೌಲಭ್ಯಗಳ ವಿವರ ಕೆಳಕಂಡಂತಿದೆ:

ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು

1. ಬೋಜನಾ ವೆಚ್ಚ – ಮಾಹೆಯಾನ ರೂ. 400.00
2. ಸಮವಸ್ತ್ರ – ವಾರ್ಷಿಕ ರೂ. 500.00
3. ಇತರೆ ವೆಚ್ಚ – ಮಾಹೆಯಾನ ರೂ. 40.00
4. ಕ್ಷೌರದ ವೆಚ್ಚ – ವಾರ್ಷಿಕ ರೂ. 50.00
5. ಪಠ್ಯ ಪುಸ್ತಕ ಮತ್ತು ಸ್ಟೇಷನರಿ ವೆಚ್ಚ – ವಾರ್ಷಿಕ ರೂ. 250.00
6. ಹಾಸಿಗೆ ಹೊದಿಕೆ 3 ವರ್ಷಕ್ಕೊಮ್ಮೆ – ರೂ. 400/–

ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು

1. ಬೋಜನಾ ವೆಚ್ಚ – ಮಾಹೆಯಾನ ರೂ. 450.00

ಇ) ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟವನ್ನು ಉತ್ತಮಪಡಿಸಲು 6ನೇ ತರಗತಿಯಿಂದ 10ನೇ ತರಗತಿವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಶಿಷ್ಯವೇತನವನ್ನು ನೀಡಲಾಗುತ್ತಿದೆ. ಗೌರವಧನ ನೀಡಿ ಭೋದಕರನ್ನು ನೇಮಿಸಲಾಗಿದೆ. ಅಲ್ಲದೆ ಕಲರ್ ಟೆಲಿವಿಷನ್, ಗ್ರಂಥಾಲಯ, ಸೋಲಾರ್ ವಾಟರ್ ಹೀಟರ್, ಸೋಲಾರ್ ಲೈಟಿಂಗ್ಸ್ ಮತ್ತು ಅನಿಲ ಸಂಪರ್ಕ ಮುಂತಾದ ಸೌಲಭ್ಯಗಳನ್ನೂ ಸಹ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಿಶೇಷವಾಗಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಅನುಕೂಲಕರ ವಾತಾವರಣವನ್ನು ನಿರ್ಮಿಸಲು ಹಾಗೂ ಉತ್ತಮ ವಸತಿ ಸೌಕರ್ಯ ಕಲ್ಪಿಸಲು ಹೊಸ ವಿದ್ಯಾರ್ಥಿನಿಲಯ ಕಟ್ಟಡಗಳನ್ನು ಕಟ್ಟಲಾಗುತ್ತಿದೆ.

ಉ) ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸೌಕರ್ಯ ಒದಗಿಸಲು ಕ್ರಮ ಕಐಗೊಳ್ಳಲಾಗುತ್ತಿದೆ. ಹೆಚ್ಚುವರಿ ಅನುದಾನ ಲಭ್ಯವಿದ್ದಾಗ ಕ್ರಮಬದ್ಧವಾಗಿ ಉನ್ನತಶ್ರೇಣಿಗೆ ತರಲಾಗುವುದು.

ಮೈಸೂರು ಜಿಲ್ಲೆಯಲ್ಲಿ ಕೈಗೊಂಡಿರುವ ಹಜ್ ಯಾತ್ರೆ ಕುರಿತು

4609 (5367) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ಸಾಲುಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಹಜ್ ಯಾತ್ರೆ ಕೈಗೊಂಡಿರುವವರ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ಕೊಡುವುದು)

ಆ) ಈ ರೀತಿ ಹಜ್ ಯಾತ್ರೆಗೆ ಆಗಿರುವ ವೆಚ್ಚ ಎಷ್ಟು? ಸರ್ಕಾರದ ಪಾಲು ಎಷ್ಟು?

ಇ) ಹಜ್ ಯಾತ್ರೆಯನ್ನು ಕಡಿಮೆ ಖರ್ಚಿನಲ್ಲಿ ಹಾಗೂ ಕಡಿಮೆ ಕಾಲಾವಕಾಶದಲ್ಲಿ ಕೈಗೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಈ) ಹಜ್‌ಯಾತ್ರೆ ಕೈಗೊಳ್ಳಲು ಸಾಧ್ಯವಾಗದ ಬಡಅಲ್ಪಸಂಖ್ಯಾತರು ಸಹಾ ಯಾತ್ರೆ ಕೈಗೊಳ್ಳುವಂತೆ ಮಾಡಲು ಸರ್ಕಾರ ಉದ್ದೇಶಿಸಿರುವ ಕ್ರಮ ಏನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) 2001 : 341
2002 : 243
2003 : 168

ತಾಲ್ಲೂಕುವಾರು ವಿವರಗಳನ್ನು ಅನುಬಂಧ–Iರಲ್ಲಿ ನೀಡಲಾಗಿದೆ.

ಆ) ಹಜ್‌ಯಾತ್ರೆ ಕೈಗೊಳ್ಳಲು ಹಜ್ ಯಾತ್ರಿಕರೇ ಅವರ ಸ್ವತಃ ಖರ್ಚಿನಲ್ಲಿ ಭರಿಸಬೇಕಾಗುತ್ತದೆ. ಆದರೆ, ವಿಮಾನಯಾನ ಮಾಡಲು ಹಜ್ ಯಾತ್ರಿಕರಿಗೆ ಕೇಂದ್ರ ಸರ್ಕಾರವು ಸ್ವಲ್ಪಮಟ್ಟಿಗೆ ರಿಯಾಯಿತಿ ನೀಡುತ್ತಾರೆ. ರಾಜ್ಯ ಸರ್ಕಾರವು ಹೆಜ್‌ಯಾತ್ರಿಕರಿಗೆ ಯಾವುದೇ ಧನಸಹಾಯ ನೀಡುತ್ತಿಲ್ಲ. ಆದ್ದರಿಂದ ರಾಜ್ಯ ಸರ್ಕಾರದ ಪಾಲು ಏನೂ ಇರುವುದಿಲ್ಲ.

ಇ) ಹಜ್‌ಯಾತ್ರೆ ಕೈಗೊಳ್ಳಲು ತಗಲುವ ಖರ್ಚನ್ನು ಕೇಂದ್ರ ಹಜ್ ಸಮಿತಿ, ಮುಂಬೈ ರವರು ನಿಗದಿ ಪಡಿಸುತ್ತಾರೆ. ಹಾಗೂ ಕಾಲಾವಕಾಶದ ಬಗ್ಗೆ ಸೌದಿ ಅರೇಬಿಯಾ ಸರ್ಕಾರವು ನಿಗಧಿಪಡಿಸುತ್ತಾರೆ. ಆದ್ದರಿಂದ ರಾಜ್ಯ ಸರ್ಕಾರದ ಹಸ್ತಕ್ಷೇಪ ಈ ವಿಷಯದಲ್ಲಿ ಏನೂ ಇರುವುದಿಲ್ಲ.

ಈ) ಇಲ್ಲ. ಇಸ್ಲಾಮ ಧರ್ಮದ 5 ಮೂಲಭೂತ ತತ್ವಗಳಲ್ಲಿ ಹಜ್ ಯಾತ್ರೆ ಜೀವನದಲ್ಲಿ ಒಂದಾಗಿರುತ್ತದೆ. ಆದರೆ ಆರ್ಥಿಕವಾಗಿ ಹಿಂದುಳಿದವರಿಗೆ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸುಸ್ಥಿತಿಯಲ್ಲಿ ಇಲ್ಲದವರಿಗೆ ಹಜ್ ಯಾತ್ರೆ ಕಡ್ಡಾಯ ಇರುವುದಿಲ್ಲ.

ಮೈಸೂರು ಜಿಲ್ಲೆಯಲ್ಲಿ ವಕ್ಫ್ ಅನುದಾನ

4610 (5368) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 (ಮೂರು) ಸಾಲುಗಳಿಂದ ಮೈಸೂರು ಜಿಲ್ಲೆಯಲ್ಲಿ ಬಿಡುಗಡೆ ಮಾಡಿರುವ ವಕ್ಫ್ ಅನುದಾನ ಎಷ್ಟು? (ತಾಲ್ಲೂಕುವಾರು ಮತ್ತು ವರ್ಷವಾರು ವಿವರ ಕೊಡುವುದು)